**SC No**. 268/2021 **CW**–28
**PW**–15

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No**.268 /2021

**ಸಾಕ್ಷಿಯನ್ನು ದಿನಾಂಕ** 22.12.2025 **ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಂಜು ಎಚ್.ಡಿ | ಪಿ.ಡಬ್ಲ್ಯೂ–15 |
| ತಂದೆಯ ಹೆಸರು | : | ಲೇಟ್ ದೊಡ್ಡಸಿದ್ದಯ್ಯ | ಸಿ.ಡಬ್ಲ್ಯೂ–28 |
| ವಯಸ್ಸು | : | 42 ವರ್ಷ | |
| ಉದ್ಯೋಗ | : | ಪೊಲೀಸ್ ಇನ್ಸಪೆಕ್ಟರ್, ನಕ್ಸಲ್ ನಿಗ್ರಹ ಪಡೆ, ಕಾರ್ಕಳ | |
| ವಾಸ ಸ್ಥಳ | : | ಕಾರ್ಕಳ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ನಾನು ಆಗಸ್ಟ್ 2020 ರಿಂದ ಡಿಸೆಂಬರ್ 2021ರವರೆಗೆ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಸಬ್ ಇನ್ಸಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಆ ಕಾಲಕ್ಕೆ ದಿ.26.08.2021 ರಂದು ಸಂಜೆ 6 ಗಂಟೆಗೆ ಚಾಸಾ–1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಕ್ರೈಂ ನಂ.290/2021 ರಂತೆ ಪ್ರಕರಣ ದಾಖಲಿಸಿಕೊಂಡು ಎಫ್ ಐ ಆರ್ ನ್ಯಾಯಾಲಯಕ್ಕೆ ಮತ್ತು ಹಿರಿಯ ಅಧಿಕಾರಿಗಳಿಗೆ

ಕಳಿಸಿದ್ದೆನು. ನಿಪಿ–1 ಎಂದು ಗುರುತಿಸಿರುವ ದೂರು ಚಾಸಾ–1 ರವರು ಸಲ್ಲಿಸಿದ ದೂರು ಇದ್ದು, ಅದರಲ್ಲಿ ನನ್ನ ಸಹಿ ಇದ್ದು ಅದನ್ನು **ನಿಪಿ–1 (ಬಿ)** ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನಿಪಿ–59 ನಾನು ದಾಖಲಿಸಿಕೊಂಡಿದ FIR ಇದ್ದು ಅದರಲ್ಲಿ ನನ್ನ ಸಹಿ ಇದೆ, ಸದರಿ ಸಹಿಯನ್ನು ನಿಪಿ–59(ಎ) ಎಂದು ಗುರುತಿಸಿದೆ. ಸದರಿ ಪ್ರಕರಣ ಘೋರ ಪ್ರಕರಣವಾಗಿದ್ದರಿಂದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ–30 ರವರಿಗೆ ಕೊಟ್ಟಿದ್ದೆ.

3. ನಂತರ ದಿನಾಂಕ 28.08.2021 ರಂದು ಸದರಿ ಪ್ರಕರಣದ ಆರೋಪಿ ಪತ್ತೆಗಾಗಿ ನನ್ನನ್ನು ಮತ್ತು ಚಾಸಾ–25 ಮತ್ತು 26 ರವರನ್ನು ನೇಮಿಸಿದ್ದು, ದಿ. 31.08.2021 ರಂದು ತಿ.ನರಸೀಪುರ ತಾಲ್ಲೂಕು, ಮೂಗುರು ಬಸ್ ನಿಲ್ದಾಣ ಬಳಿ ಮಧ್ಯಾಹ್ನ 1.30 ಕ್ಕೆ ಸದರಿ ಆರೋಪಿಯನ್ನು ವಶಕ್ಕೆ ಪಡೆದು ಮಧ್ಯಾಹ್ನ 2.15 ಕ್ಕೆ ಚಾಸಾ–30 ರವರ ಮುಂದೆ ಹಾಜರುಪಡಿಸಿ ವರದಿ ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ವರದಿ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿ–63 ಎಂದು, ಸಹಿಯನ್ನು 63(ಎ) ಎಂದು ಗುರುತಿಸಿದೆ. ಬಾತ್ಮೀದಾರರು ಮಾಹಿತಿ ಕೊಟ್ಟಿದ್ದರಿಂದ ಅವರು ಮೂಗುರು ಬಸ್ ನಿಲ್ದಾಣದ ಬಳಿ ಇದ್ದ ಬಗ್ಗೆ ಗೊತ್ತಾಗಿತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿಯು ಆ ದಿನ ನಾವು ವಶಕ್ಕೆ ಪಡೆದು ಚಾಸಾ–30 ರವರ ಮುಂದೆ ಹಾಜರುಪಡಿಸಿದ ವ್ಯಕ್ತಿ ಇರುತ್ತಾನೆ.

**SC No**. 268/2021 **CW**–28
**PW**–15

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

4. ದೂರನ್ನು ಯಾರು ಬರೆದಿದ್ದಾರೆ ಎಂದು ಗೊತ್ತಿಲ್ಲ. ಆ ದಿನ ಚಾಸಾ–1 ರವರ ಜೊತೆ ಬೇರೆ ಯಾರು ಬಂದಿರಲಿಲ್ಲ. ಆ ದಿನ ಚಾಸಾ–2 ಮಹದೇವಸ್ವಾಮಿ ಠಾಣೆಗೆ ಬಂದಿರಲಿಲ್ಲ. ಆ ದಿನ ಚಾಸಾ–2 ರವರು ಸಹ ಚಾಸಾ–1 ರವರೊಂದಿಗೆ ಬಂದಿದ್ದರು ಎಂದರೆ ಸರಿಯಲ್ಲ. ಆ ದಿನ ನಮ್ಮನ್ನು ಆರೋಪಿತನ ಪತ್ತೆಗಾಗಿ ನೇಮಿಸಿದ ಬಗ್ಗೆ ಲಿಖಿತ ಆದೇಶ ಮಾಡಿಲ್ಲ. ಆರೋಪಿ ಮೂಲತಃ ಮೂಗೂರು ಗ್ರಾಮದವನು ಎಂದರೆ ನಿಜ. ಆರೋಪಿಯನ್ನು ಅವರ ಮನೆಯಿಂದ ಕರೆದುಕೊಂಡು ಹೋಗಿದ್ದೇವೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಮೈಸೂರು**